ಶ್ರೀ ಬಾಲಚಂದ್ರ ಲ. ಜಾರಕಿಹೊಳಿ : ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ, ದಿ: 30-03-2011ರೊಳಗೆ ಮಾಡುವು ದಕ್ಕಾಗುವುದಿಲ್ಲ. ಅದಾದನಂತರ, ಖಂಡಿತ ಸರ್ಕಾರ ಅದರ ಬಗ್ಗೆ ಪರಿಶೀಲನೆ ಮಾಡುತ್ತದೆ. ಮಹದೇವಪ್ಪನವರೆ, ತಾವು ಕೇಳಿದಂತೆ, ಚಾಮನಹಳ್ಳಿ ವಿಷಯವನ್ನು ಈ census ಮುಗಿದ ನಂತರವೇ ಪರಿಶೀಲನೆ ಮಾಡಲಿಕ್ಕಾ ಗುತ್ತದೆ. ಸರ್ಕಾರ ಖಂಡಿತ ಪರಿಶೀಲನೆ ಮಾಡುತ್ತದೆ.

ಶ್ರೀ ಸುರೇಶ್ ಗೌಡ : ನಗರಗಳಲ್ಲಿ extension ಗಳು ಬೆಳೆಯುತ್ತಿವೆ. ಆ extension ಗಳು ಆ ಗ್ರಾಮಕ್ಕೆ ಸೇರಿಕೊಳ್ಳುತ್ತವೆ.

ಅಧ್ಯಕ್ಷರು : ಮಾನ್ಯ ಎ. ಮಂಜುರವರೆ, ತಮ್ಮ ಪ್ರಶ್ನೆಯನ್ನು ಮಾನ್ಯ ಲೋಕೋಪಯೋಗಿ ಸಚಿವರ ಬಂದ ಮೇಲೆ ತೆಗೆದುಕೊಳ್ಳುತ್ತೇನೆ.

ಲಿಂಗಸುಗೂರು ಟಿ.ಸಿ.ಗಳ ವಿವರ ಹಾಗೂ ಅವುಗಳನ್ನು ವಿತರಣೆ ಮಾಡದಿರುವುದು

29 (296) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಿಂಗಸುಗೂರು ತಾಲ್ಲೂಕಿಗೆ ಕೊಟ್ಟ ಟಿ.ಸಿ.ಗಳು ಎಷ್ಟು?

ಆ) ಅಭಿವೃದ್ಧಿ ವ್ಯವಸ್ಥೆಯಲ್ಲಿ (ಸಿಸ್ಟಮ್ ಇಂಪ್ರೊಮೆಂಟ್)ನಲ್ಲಿ ಮಸ್ಕಿ ಕ್ಷೇತ್ರಕ್ಕೆ ಎರಡು ವರ್ಷಗಳಿಂದ ಟಿ.ಸಿ. ಕೊಡದೆ ಇರುವುದಕ್ಕೆ ಕಾರಣವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಲಿಂಗಸುಗೂರು ತಾಲ್ಲೂಕಿಗೆ (ಮಾಹೆ ಏಪ್ರಿಲ್-09 ರಿಂದ ಜನವರಿ-10 ವರೆಗೆ) ಹೊಸ ಕಾಮಗಾರಿಗಳಿಗೆ ಕೊಟ್ಟಿರುವ ಟಿ.ಸಿ.ಗಳ ಸಂಖ್ಯೆ: 18 ಸುಟ್ಟು ಹೋಗಿರುವ ಟಿ.ಸಿ.ಗಳ ಬದಲಾಯಿಸುವುದಕ್ಕೆ 172 ಮತ್ತು ಅಭಿವೃದ್ಧಿ ಕೆಲಸಕ್ಕೆ 8 ಟಿ.ಸಿ.ಗಳನ್ನು ಕೊಡಲಾಗಿದೆ.

ಆ) ಅಭಿವೃದ್ಧಿ ವ್ಯವಸ್ಥೆಯಲ್ಲಿ (ಸಿಸ್ಟಮ್ ಇಂಪ್ರೂಮೆಂಟ್)ನಲ್ಲಿ ಮಸ್ಕಿ ಕ್ಷೇತ್ರದಲ್ಲಿ 2008-09 ಸಾಲಿನಲ್ಲಿ 22 ಮತ್ತು 2009-10ನೇ ಸಾಲಿನಲ್ಲಿ 4 ಪರಿವರ್ತಕಗಳನ್ನು ಅಳವಡಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಅನಿರೀಕ್ಷಿತವಾಗಿ ಸಂಭವಿಸಿದ ಪ್ರವಾಹದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯುತ್ ವಿತರಣಾ ಪರಿವರ್ತಕಗಳು

ವಿಫಲಗೊಂಡಿರುತ್ತವೆ. ಸಾರ್ವಜನಿಕರಿಗೆ ವಿದ್ಯುತ್ತಿನ ತೊಂದರೆ ಆಗದಂತೆ ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಿ ಪುನರ್ ಸಂಪರ್ಕ ನೀಡುವ ದೃಷ್ಟಿಯಿಂದ ಲಭ್ಯವಿರುವ ಪರಿವರ್ತಕಗಳನ್ನು ವಿಫಲಗೊಂಡ ಪರಿವರ್ತಕ ಗಳನ್ನು ಬದಲಾಯಿಸುವ ಕಾರ್ಯಕ್ಕೆ ನೀಡಲಾಗಿದೆ.

ಶ್ರೀ ಮಾನಪ್ಪ ವಜ್ಜಲ(ಪ್ರತಾಪಗೌಡ ಪಾಟೀಲ್ ಪರವಾಗಿ): ಮಾನ್ಯ ಅಧ್ಯಕ್ಷರೆ, ಆದರೆ, ಸಮಸ್ಯೆ ಏನೆಂದರೆ, ಮಸ್ಕಿ ಕ್ಷೇತ್ರ ನನ್ನ ಲಿಂಗಸುಗೂರು ಕ್ಷೇತ್ರಕ್ಕೆ ಸಮೀಪವಾದ ಕ್ಷೇತ್ರವಾಗಿದೆ. ಮಸ್ಕಿ ಕ್ಷೇತ್ರಕ್ಕೆ 2 ವರ್ಷಗಳಿಂದ System improvement ಮಾಡುವ ಸಲುವಾಗಿ ಇನ್ನೂ T.C. ಕೊಟ್ಟಿಲ್ಲ. ಅಲ್ಲಿರುವ ಪರಿಸ್ಥಿತಿ ಏನಾಗಬೇಕು? ಅಲ್ಲಿ improvement ಹೇಗಾಗಬಹುದು? ಇವತ್ತು ಅಲ್ಲಿನ ರೈತರಿಗೆ ಬಹಳ ತೊಂದರೆಯಾಗಿದೆ. ವಿಶೇಷವಾಗಿ ಅದು ಹಿಂದುಳಿದ ಕ್ಷೇತ್ರವಾಗಿದೆ. ಅದು SC/ST ಜನ ಹೆಚ್ಚು ವಾಸ ಮಾಡುವ ಕ್ಷೇತ್ರವಾಗಿದೆ. ಆ ಜನರಿಗೆ, ಗುಡ್ಡಗಾಡು ಪ್ರದೇಶದಲ್ಲಿ ವಾಸ ಮಾಡುವ ಜನರಿಗೆ ಬೆಳಕಿಲ್ಲದ ಪರಿಸ್ಥಿತಿಯಾಗಿದೆ.

ಏನು ಉದ್ದೇಶವೆಂದರೆ, ಎರಡು ವರ್ಷಗಳಿಂದ T.C. ಕೂಡ supply ಮಾಡಲಿಲ್ಲವೆಂದರೆ ಅನ್ಯಾಯವಾಗುತ್ತದೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಲಿಂಗಸುಗೂರು ಮತ್ತು ಮಸ್ಕಿ ಕ್ಷೇತ್ರಗಳಿಗೆ ಹೆಚ್ಚು ಗಮನ ಕೊಟ್ಟು ಅಲ್ಲಿರುವ ಸಮಸ್ಯೆಗಳನ್ನು ಆದಷ್ಟು ಬೇಗ ಪರಿಹರಿಸಬೇಕು. ಎರಡನೆಯದಾಗಿ, ಈಗಿರುವ ಪರಿಸ್ಥಿತಿ ಏನೆಂದರೆ T.C. ಸುಟ್ಟರೆ ಅದು repair ಆಗಿ ಮತ್ತೆ ಅಳವಡಿಸಬೇಕೆಂದರೆ ಅಧಿಕಾರಿಗಳು 2–3 ತಿಂಗಳು ಸಮಯ ತೆಗೆದುಕೊಳ್ಳುತ್ತಾರೆ. ಅಷ್ಟು ತಡವೇಕೆ ಆಗುತ್ತದೆ ಎಂಬ ಬಗ್ಗೆ ಸರ್ಕಾರ ಉತ್ತರದಲ್ಲಿ ತಿಳಿಸಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ : ಪ್ರತಾಪಗೌಡ ಪಾಟೀಲ್‌ರವರ ಪ್ರಶ್ನೆಗೆ ಸರ್ಕಾರ ಈಗಾಗಲೇ ಉತ್ತರಿಸಿದೆ. ಉತ್ತರದಲ್ಲಿ ತಿಳಿಸಿರುವ ಹಾಗೆ 2008–09ನೇ ಸಾಲಿಗೆ 22 Transformer ಗಳನ್ನು ಈಗಾಗಲೇ ಒದಗಿ ಸಿದ್ದೇವೆ. 2009–10ನೇ ಸಾಲಿಗೆ 4 transformer ಗಳನ್ನು ಒದಗಿಸಿದ್ದೇವೆ. ಇಷ್ಟಾದರೂ ಕೂಡ ಆ ಕ್ಷೇತ್ರದಲ್ಲಿರುವ specific ಸಮಸ್ಯೆ ಬಗ್ಗೆ ಹೇಳಿದ್ದಾರೆ. ಅದನ್ನು ನಾನು GESCOM ನವರಿಗೆ ಹೇಳಿ ಅದಕ್ಕೆ ಪರಿಹಾರ ಕಂಡುಹಿಡಿ ಯುತ್ತೇವೆಂಬ ವಿಶ್ವಾಸವನ್ನು ನಾನು ವ್ಯಕ್ತಪಡಿಸುತ್ತೇನೆ.